


■ ಮನೋರಂಜನ್ ಡಿ.ಎನ್

## ಬೇತಾಳನ ಛಾಯೆ

ಭಯಂಕರವಾದ ಬೇತಾಳನಂತಹ ಮಹಾರೂಪವು ಮನೆಯ ಎದುರು ಮನೆ ಮತ್ತು ತೋಟವನ್ನು ವಿಭಾಗಿಸುವ ತಂತಿ ಬೇಲಿಯನ್ನು ಹಾರಿ ಮನೆಯತ್ತಲೇ ಮುನ್ನುಗ್ಗಿತ್ತು. ಮನೆಯ ಎದುರು ತಣ್ಣಗೆ ಮಲಗಿದ್ದ ಕೆಲಸದ ಆಳು ಚೆನ್ನಣ್ಣ ಧಡಕ್ಕನೆ ಎದ್ದು ಕುಳಿತು 'ಅಯ್ಯೋ ಅಣ್ಣಾವ್ರೆ ಬೇತಾಳ.. ಕಾಪಾಡಿ' ಎಂದು ಚೀರಿದ.

ಬೆಳ್ಳಂಬೆಳಗ್ಗೆ 3 ಗಂಟೆ ಬಳ್ಳಾರಿಯ ಬಳಿ ತನ್ನ ಕುಟುಂಬದೊಂದಿಗೆ ಮೋಹನ ವಾಪಸ್ ಆಗುತ್ತಿದ್ದ. ಟೆಂಪೋ ಟ್ರಾವೆಲರ್‌ನಲ್ಲಿ ತನ್ನ ಸೀಟ್‌ನಲ್ಲಿ ಬೆಚ್ಚಗೆ ಮಲಗಿದ್ದ ಆತನಿಗೆ ತನ್ನಮನೆಯ ಮುಂದೆ ಬೇತಾಳ ರೂಪವೊಂದು ಚೆನ್ನಣ್ಣನ ಮೇಲೆ ಎರಗಿದ ವಿಚಿತ್ರವಾದ ಕನಸು ಬಿದ್ದಿತ್ತು. ರಾತ್ರಿ ಮನೆ ಕಾಯೋ ಕೆಲಸ ಚೆನ್ನಣ್ಣನಿಗೆ ವಹಿಸಿದ್ದ. ಚೆನ್ನಣ್ಣ 50ರ ಆಸುಪಾಸಿನ ಶ್ರಮಜೀವಿ. ನಿನ್ನೆ ಬೆಳಗ್ಗೆ ಫೋನ್ ಮಾಡಿ 'ಅಣ್ಣಾರೆ ನಮ್ಮ ತೋಟದಾಗೆ ಏನೋ ಇದೆ, ಇಡೀ ರಾತ್ರಿ ಏನೇನೋ ಸದ್ದು ಮಾಡ್ಕೊಂಡು ಓಡಾಡುತ್ತೆ, ಬೇತಾಳನ ಹಾಗೆ ಇದೆ, ನಂಗೆ ಒಬ್ಬನೇ ಇರೋಕೆ ಭಯ ಆಗ್ತಿದೆ' ಅಂತ ಹೇಳಿದ್ದ. ತನ್ನ ಮನೆಯ ಬಳಿ ಏನಿರಬಹುದು ಅಂತಹುದು, ಚೆನ್ನಣ್ಣ ಸುಮ್ಮನೆ ಕೆಲಸ ಕಳ್ಳನಾಗೋದಕ್ಕೆ ಈ ರೀತಿ ಹೇಳಿರಬಹುದೇನೋ ಅಂದುಕೊಂಡಿದ್ದ. ಅದೇ ಬೇತಾಳನ ರೂಪವನ್ನು ಕಲ್ಪಿಸಿಕೊಂಡು ಮಲಗಿದ್ದ.

ಬೆಳಗಾಗುತ್ತಿದ್ದಂತೆ ಚೆನ್ನಣ್ಣನಿಗೆ ಫೋನ್ ಮಾಡಿದ. ಎಷ್ಟೇ ಬಾರಿ ಪ್ರಯತ್ನಿಸಿದರೂ ಚೆನ್ನಣ್ಣ ಫೋನ್ ಎತ್ತಲೇ ಇಲ್ಲ. ಮತ್ತೆ ಸ್ವಲ್ಪ ಹೊತ್ತಿನ ನಂತರ ಯಾವುದೋ ನಂಬರ್‌ನಿಂದ ಕಾಲ್ ಬಂತು, ಆದರೆ ಆ ಕಡೆಯ ಮಾತುಗಳು ಯಾವುದು ಸ್ಪಷ್ಟವಾಗಿರಲಿಲ್ಲ. 9 ಗಂಟೆಯ ಹೊತ್ತಿಗೆ ಮೋಹನ ತನ್ನ ಮನೆ ತಲುಪಿದ. ಮನೆಯ ಮುಂದೆ ಸ್ವಲ್ಪ ಜನ ಸೇರಿದ್ದರು, ಮನೆಯ ಗೇಟಿನ ಬೀಗವನ್ನು ಒಡೆದು ಒಳ ಹೋಗಿದ್ದರು, ಪೊಲೀಸ್ ಆ್ಯಂಬುಲೆನ್ಸ್ ಎಲ್ಲ ನಿಂತಿತ್ತು.

ಮನೆಯ ಎದುರು ಚೆನ್ನಣ್ಣ ಹೆಣವಾಗಿ ಬಿದ್ದಿದ್ದ, ಪೊಲೀಸರು ಮಹಜರು ಮುಗಿಸಿ ಮೋಹನನ ಬಳಿ ಸಹಿ ತೆಗೆದು ಕೊಂಡು ಹೋದರು. ಮನೆಯ ಎದುರು ಮನೆ ತೋಟವನ್ನು ಬೇರ್ಪಡಿಸುವ ಬೇಲಿ ಒಂದು ಕಡೆ ಕಿತ್ತು ಹೋಗಿತ್ತು, ಕೊಟ್ಟಿಗೆಯಲ್ಲಿ ಕಟ್ಟಿದ್ದ ಭಾರಿ ಗಾತ್ರದ ಹೋರಿ ಬೇಲಿ ಕಿತ್ತು ಒಳ ಬಂದು ತನ್ನ ಹೂದೋಟವನ್ನೆಲ್ಲ ತಿಂದು ಮುಗಿಸಿತ್ತು, ಕುತ್ತಿಗೆಗೆ ಕಟ್ಟಿದ್ದ ಮರದ ಗಂಟೆ ವಿಚಿತ್ರವಾದ ಸದ್ದು ಮಾಡುತ್ತಿತ್ತು. ಬೇಲಿ ಹಾರುವಾಗ ಹೊಟ್ಟೆಯ ಬಳಿ ಆದ ಗಾಯದಿಂದ ರಕ್ತ ಇನ್ನೂ ಸುರಿಯುತ್ತಿತ್ತು. ತನ್ನ ಬೇತಾಳನ ಕನಸು ನಿಧಾನವಾಗಿ ಮೋಹನನಿಗೆ ಅರ್ಥವಾಗಲು ಶುರುವಾಯ್ತು. ರಾತ್ರಿ ಏನಾಗಿದೆಯೋ ಅದೇ ಕನಸಲ್ಲಿ ಕಂಡಿತ್ತು. ಪೋಸ್ಟ್ ಮಾರ್ಟಮ್‌ನಲ್ಲಿ ಷರಾ ಬರೆದಿದ್ದರು.. 'ಸಾವಿಗೆ ಕಾರಣ ಭಾರೀ ಹೃದಯಾಘಾತ'!

## ಚಳಿಗಾಲದ ಒಂದು ರಾತ್ರಿ

ಬಾತ್‌ರೂಮ್‌ನಲ್ಲಾದ ಸದ್ದಿಗೆ ಎಚ್ಚರವಾಗಿ ಡಿಸೆಂಬರ್‌ನ ಕೊರೆಯುವ ಮಧ್ಯರಾತ್ರಿಯ ಚಳಿಯಲ್ಲಿ ಏನು ಸದ್ದು ಎಂದು ನೋಡಲು ಆತ ತನ್ನ ಮಲಗುವ ಕೋಣೆಯಿಂದ ಹೊರಬಂದನು. ಒಂಟಿಯಾಗಿದ್ದ ಆತ ರಾತ್ರಿ ಮಲಗುವ ಮುನ್ನ ನೋಡಿದ 'ಕಂಜೂರಿಂಗ್' ಇಂಗ್ಲಿಷ್ ಸಿನೆಮಾದ ಭಯಾನಕ ದೃಶ್ಯಗಳೇ ಅವನ ತಲೆಯಲ್ಲಿ ಗುಯ್ ಗುಡುತ್ತಿತ್ತು. ಬಾತ್ ರೂಮ್ ನ ಚಿಲಕ ಹೊರಗಡೆಯಿಂದ ಭದ್ರವಾಗಿ ಹಾಕಿತ್ತು. ಲೈಟ್ ಹಾಕಿ ಬಾಗಿಲು ತೆರೆದು ನೋಡಿದಾಗ ಸ್ಟೂಲ್ ಮೇಲೆ ಇಟ್ಟಿದ್ದ ತುಂಬಿದ ನೀರಿನ ಬಕೆಟ್ ಅಡ್ಡಬಿದ್ದಿತ್ತು.

ಸಿನೆಮಾದ ಮೂಡ್ ನಲ್ಲಿ ಏನನ್ನೋ ಯೋಚನೆ ಮಾಡುತ್ತಾ ಬಾಗಿಲು ತೆರೆದಿದ್ದ ಅವನು 'ಇಷ್ಟೇನಾ' ಅಂತ ತನ್ನನ್ನು ತಾನು ಸಮಾಧಾನ ಮಾಡಿಕೊಂಡು ಮತ್ತೆ ಬಾತ್‌ರೂಮ್ ಬಾಗಿಲ ಚಿಲಕ ಬಿಗಿಗೊಳಿಸಿ ಲೈಟ್ ಆಫ್ ಮಾಡಿ ತನ್ನ ಮಲಗುವ ಕೋಣೆ ಕಡೆಗೆ ಹೊರಟ, ಎರಡೇ ಹೆಜ್ಜೆ ಮುಂದೆ ಬಂದಿದ್ದ ಮತ್ತೆ ನಳ್ಳಿ ನೀರಿನ ಸದ್ದು. ಈ ಬಾರಿ ಆಫ್ ಮಾಡಿದ್ದ ಲೈಟ್ ಆನ್ ಆಗಿತ್ತು. ಹಾಕಿದ ಚಿಲಕ ಹಾಗೆ ಇತ್ತು. ಒಳಗೆ ಶವರ್ ಬಾತ್‌ನ ನೀರಲ್ಲಿ ಯಾರೋ ಸ್ನಾನ ಮಾಡುತ್ತಿರುವ ಸದ್ದು. ಹೊರಗಿದ್ದ ಇವನು ಆ ಚಳಿಯಲ್ಲೂ ಒದ್ದೆಯಾಗಿದ್ದ. ■